



## ಥರಾವರಿ ಪರಿಕಲ್ಪನೆ

ಮಕರ ಸಂಕ್ರಾಂತಿ ಸಂದರ್ಭ ಹತ್ತು ದಿನಗಳ ಕಾಲ ಈ ಗೊಂಬೆಗಳನ್ನು ಪ್ರದರ್ಶನಕ್ಕೆ ಇಡಲಾಗುತ್ತದೆ. ಕಳೆದ ಬಾರಿ ಕಾರ್ಟೂನ್ ವಿಲೇಜ್, ತಿರುವಣ್ಣಾಮಲೈ ದೇಗುಲದ ಪರಿಕಲ್ಪನೆಯಲ್ಲಿ ಗೊಂಬೆ ಕೂರಿಸಲಾಗಿತ್ತು. ಈ ಬಾರಿ ಶಕ್ತಿ ದೇವತೆ, ಸಪ್ತ ಸಂಖ್ಯೆ ಹಾಗೂ ಕೃಷ್ಣನ ಲೀಲೆ ಹಾಗೂ ಹರಿಹರ ದೇವಸ್ಥಾನಗಳ ವಸ್ತುವಿಷಯವನ್ನು ಆಯ್ಕೆ ಮಾಡಲಾಗಿದೆ. ಜತೆಗೆ 8ನೇ ಶತಮಾನದಲ್ಲಿದ್ದ ಕೃಷ್ಣನ ಭಕ್ತೆ ಆಂಡಾಳ್ (ಗೋಧಾದೇವಿ) ಶ್ರೀಕೃಷ್ಣನನ್ನು ಪತಿಯೆಂದು ಭಾವಿಸಿ ಆರಾಧಿಸಿದ ದಕ್ಷಿಣ ಭಾರತದ ಏಕೈಕ ಮಹಿಳಾ ಆಳ್ವಾರ್! ಅವಳ ಬದುಕಿನ ಚಿತ್ರಣವನ್ನು ಗೊಂಬೆಗಳು ಬಿಂಬಿಸಿವೆ. ಪ್ರದರ್ಶನ ನೋಡಲು ಬರುವವರಿಗೆ ಗೊಂಬೆಗಳ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ. ಮುಂದಿನ ಬಾರಿಗೆ 'ಕಾಂತಾರ' ಸಿನಿಮಾ ಪರಿಕಲ್ಪನೆಯ ಗೊಂಬೆ ಪ್ರದರ್ಶನ ಮಾಡುವಂತೆ ನೋಡುಗರಿಂದ ಅಭಿಪ್ರಾಯವೂ ಬಂದಿದೆ.

'ಚಿಕ್ಕವಳಿದ್ದಾಗಿನಿಂದಲೂ ಗೊಂಬೆಗಳ ಬಗ್ಗೆ ಕುತೂಹಲ ಇತ್ತು. ಮದುವೆಯಾಗಿ ಅಮೆರಿಕಕ್ಕೆ ಹೋದ ಮೇಲೆ ಅದನ್ನು ಮರೆತಿದ್ದೆ. 2002ರಲ್ಲಿ ವಾಪಸ್ ಬೆಂಗಳೂರಿಗೆ ಬಂದೆವು. ನಮ್ಮ ನೆರೆಮನೆಯಲ್ಲಿ ದಸರಾ ಸಮಯದಲ್ಲಿ ಗೊಂಬೆ ಕೂರಿಸುವ ಪದ್ಧತಿ ನಡೆಸುತ್ತಿದ್ದುದು, ಗೊಂಬೆಗಳನ್ನು ಹತ್ತಿರದಿಂದ ಗಮನಿಸಲು ಸಾಧ್ಯವಾಯಿತು. ನಮ್ಮ ಇಬ್ಬರೂ ಹೆಣ್ಣುಮಕ್ಕಳು ಗೊಂಬೆಗಳನ್ನು ಕೂರಿಸಿ ಪ್ರದರ್ಶಿಸುವ ಬಗ್ಗೆ ಆಸಕ್ತಿ ತಳೆದರು. ಗೊಂಬೆಗಳನ್ನು ನೋಡಲೆಂದೇ ಹಲವು ಸ್ಥಳಗಳಿಗೆ ಕುಟುಂಬ ಸಮೇತ ಎಡತಾಕುತ್ತಿದ್ದೆವು' ಎಂದು ಗೊಂಬೆಗಳ ಬಗ್ಗೆ ಆಸಕ್ತಿ ಬಂದಿದ್ದನ್ನು ಖುಷಿಯಿಂದ ಹೇಳಿಕೊಳ್ಳುತ್ತಾರೆ.

'ಕಲಾತ್ಮಕತೆಯಿಂದ ಕೂಡಿರುವ ಈ ಗೊಂಬೆಗಳನ್ನು ಕಂಡಾಗೆಲ್ಲ ಎಂಥದ್ದೋ ಸಮಾಧಾನ. ನಮ್ಮ ಹೆಣ್ಣುಮಕ್ಕಳಿಗೂ ಇದರಲ್ಲಿ ಖುಷಿ ಸಿಕ್ಕಿತ್ತು. ಹಾಗಾಗಿ 2015ರಿಂದ ಗೊಂಬೆಗಳ ಪ್ರದರ್ಶನವನ್ನು ಮನೆಯಲ್ಲಿಯೇ ಆಯೋಜಿಸಲು ಶುರು ಮಾಡಿದೆವು. ಆರಂಭದಲ್ಲಿ ಪ್ರದರ್ಶನಕ್ಕಿಡುವ ಉದ್ದೇಶವಿರಲಿಲ್ಲ. ಕಂಚಿನ ಪ್ರತಿಮೆಗಳನ್ನು ಸಂಗ್ರಹಿಸುವ ಹವ್ಯಾಸವಿತ್ತು. ಮನೆಯಲ್ಲಿ ಆಗಾಗ್ಗೆ ಈ ಪ್ರತಿಮೆಗಳ ಸ್ಥಳವನ್ನು ಬದಲಾಯಿಸುತ್ತಿದ್ದೆವು. ವರ್ಷಕ್ಕೊಮ್ಮೆ ಸಂಗ್ರಹಗೊಂಡ ಪ್ರತಿಮೆಗಳನ್ನು, ಗೊಂಬೆಗಳನ್ನು ಪ್ರದರ್ಶನಕ್ಕಿಟ್ಟರೆ ಹೇಗೆ ಎಂಬ ಆಲೋಚನೆ ಬಂತು' ಎನ್ನುತ್ತಾರೆ ನಾಗೇಶ್.

ಗೊಂಬೆಗಳ ಪ್ರದರ್ಶನ ಇದೀಗ ಅವರ ಬದುಕಿನ ಭಾಗವೇ ಆಗಿಹೋಗಿದೆ. ಸೃಜನಾತ್ಮಕ ಶಕ್ತಿಯನ್ನು ಅಭಿವ್ಯಕ್ತಿಸಿಕೊಳ್ಳಲು ಅವರಿಗೆ ಸಾಧ್ಯವಾಗಿದೆ.

ಗೊಂಬೆಗಳ ತಯಾರಿಯ ಬಗ್ಗೆ ಆಸ್ಥೆ ವಹಿಸುವ ಹಲವು ಊರುಗಳಿವೆ. ಅಲ್ಲಿಗೆ ಆಗಾಗ್ಗೆ ಭೇಟಿ ಕೊಡುತ್ತಾರೆ. ತಮಗೇನು ಬೇಕು ಎಂಬುದರ ಬಗ್ಗೆ ಕಲಾವಿದರ ಜತೆ ಮಾತನಾಡುತ್ತಾರೆ. ಕಲಾವಿದರು ಈಗಾಗಲೇ ತಯಾರಿಸಿದ್ದ ಗೊಂಬೆಗಳು




ಇಷ್ಟವಾದರೆ ಖರೀದಿಸುತ್ತಾರೆ. ಗೊಂಬೆಗಳು, ಅದರ ಕುಸುರಿ ಕಲೆ, ಅದರ ತಯಾರಿಕಾ ಪ್ರಕ್ರಿಯೆ, ಹೀಗೆ ಎಲ್ಲದರ ಬಗ್ಗೆ ಮಾಹಿತಿ ಪಡೆಯುತ್ತಾರೆ.

ಕಂಚಿಯ ಅಷ್ಟಮುಡಿ ಬೀದಿಯೊಂದರಲ್ಲಿ ಗೊಂಬೆಗಳನ್ನು ತಯಾರಿಸುವ ಸಾಕಷ್ಟು ಕಲಾವಿದರು ಸಿಗುತ್ತಾರೆ. ಸೇಲಂನ ಸಮೀಪ ಬರೀ ಗಣೇಶನ ಗೊಂಬೆ ತಯಾರಿಸುವ ಕಲಾವಿದರಿದ್ದಾರೆ. ಪೌರಾಣಿಕ ಪಾತ್ರಕ್ಕೆ ಸಮಕಾಲೀನತೆಯ ಸ್ಪರ್ಶ ನೀಡುವ ಪವರ್‌ಲಿಫ್ಟಿಂಗ್ ಗಣೇಶ, ಕ್ರಿಕೆಟ್ ಆಡುತ್ತಿರುವ ಗಣಪ, ಯೋಗ ಮಾಡುತ್ತಿರುವ ವಿನಾಯಕ... ಹೀಗೆ ನಾನಾ ಬಗೆಯ ಗಣೇಶನನ್ನು ಕಸ್ಟಮೈಸ್ಡ್ ಮಾಡಿಕೊಡುತ್ತಾರೆ. ಈ ದಂಪತಿ ಸಂಗ್ರಹದಲ್ಲಿ ಗಣೇಶನ ಗೊಂಬೆಗಳೇ 800ಕ್ಕೂ ಹೆಚ್ಚಿವೆ.

'ಪ್ರತಿ ಬಾರಿಯು ಗೊಂಬೆಗಳ ಪ್ರದರ್ಶನಕ್ಕೆ ವಸ್ತುವಿಷಯ ಆಯ್ದುಕೊಳ್ಳುವುದು, ಅದಕ್ಕೆ ಸಂಬಂಧಪಟ್ಟ ಪುರಾಣ ಕಥೆಗಳನ್ನು ಹುಡುಕುವುದು, ಸೃಜನಾತ್ಮಕವಾಗಿ ಗೊಂಬೆಗಳನ್ನು ಇಡುವುದು, ಒಂದೊಂದೂ ದೀರ್ಘ ಪ್ರಕ್ರಿಯೆ' ಎಂದು ವಿವರಿಸುತ್ತಾರೆ ದಂಪತಿ. ಪ್ರದರ್ಶನದ ಪೂರ್ವಸಿದ್ಧತೆ ಒಂದು ತಿಂಗಳ ಕಾಲ ನಡೆಯುತ್ತದೆ. ಕೂರಿಸಲು ನಾಲ್ಕು ದಿನಗಳ ಕಾಲ ತೆಗೆದುಕೊಳ್ಳಲಾಗುತ್ತದೆ. ಎರಡು ಹಂತಗಳಲ್ಲಿ ಗೊಂಬೆ ಪ್ರದರ್ಶನದ ಯೋಜನೆ ಇರುತ್ತದೆ. ಒಂದು ವಸ್ತು ವಿಷಯದ ಆಯ್ಕೆ, ಮತ್ತೊಂದು ಅದನ್ನು ನಿರೂಪಿಸುವ ಬಗೆ.

ಸಾಮಾನ್ಯವಾಗಿ ಪಾರ್ವತಿ ಗಣೇಶನಿಗೆ ಲಡ್ಡು ತಿನ್ನಿಸುತ್ತಿರುವುದನ್ನು ನೋಡಿರಬಹುದು. ಆದರೆ ಸರ್ವಶಕ್ತನಾದ ವಿಷ್ಣು ತನ್ನ ತೊಡೆ ಮೇಲೆ ಗಣೇಶನನ್ನು ಕೂರಿಸಿ ಲಡ್ಡು ತಿನ್ನಿಸುವ ಅಪರೂಪದ ಗೊಂಬೆ ಈ ಪ್ರದರ್ಶನದ ಆಕರ್ಷಣೆ. ಇದಲ್ಲದೇ, ಕೃಷ್ಣ ತನ್ನ ಇಬ್ಬರು ಹೆಂಡಿರಾದ ರುಕ್ಮಿಣಿ ಹಾಗೂ ಸತ್ಯಭಾಮೆಯೊಂದಿಗೆ ಸರಳ ಉಡುಗೆಯಲ್ಲಿರುವ, 200 ವರ್ಷಗಳ ಇತಿಹಾಸ ಹೊಂದಿರುವ ಗೊಂಬೆಯೂ ಪ್ರದರ್ಶನದ ಭಾಗವಾಗಿತ್ತು.

ಆಂಧ್ರ ಮೂಲದ ರಮಣಿ ಎನ್ನುವವರು ನಾಗಪುರದಲ್ಲಿ ಗೊಂಬೆಗಳನ್ನು ತಯಾರಿಸುವ ತರಬೇತಿ ನಡೆಸುತ್ತಾರೆ. ಇದೇ ಕಲಾವಿದೆಯಿಂದ ತಯಾರಾದ ನೃತ್ಯ ಮಾಡುವ ಗೊಂಬೆಗಳನ್ನು ಹಿಡಿದುಕೊಂಡು ಸಿರೀಶಾ ದಂಪತಿ, 'ನೋಡಿ ಇವೆಷ್ಟು ಮುದ್ದಾಗಿವೆ. ಥೇಟ್ ನಮ್ಮನೆಯ ಇಬ್ಬರು ಹೆಣ್ಣುಮಕ್ಕಳಂತೆ' ಎಂದು ಹೆಮ್ಮೆಯ ನೋಟ ಬೀರಿದರು.

ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್.

